ಗಮನಿಸಿ ನನ್ನತ್ತ ಒಮ್ಮೆ ಒಂದು ತರಹ ಮುಖ ಮಾಡಿದಳು. ಇವನೆಂತಹ ಜಿಪುಣನೆಂದು ಅವಳು ಭಾವಿಸಿದಳೇನೋ! ಇರಲಿ. ನನ್ನ ಬಳಿ ಉಳಿದದ್ದೇ ಅಷ್ಟು.

ನಾವು ಎದ್ದು ಹೊರಗೆ ಬಂದೆವು.

"ನೀವು ಮಧ್ಯಾಹ್ನದ ಊಟಕ್ಕೆ ನನ್ನ ಫಿಲಾಸಫಿ ಪಾಲಿಸಬೇಕು. ಲೈಟ್ ಮತ್ತು ನ್ಯೂಟ್ರೀಶಿಯಸ್!"

"ಖಂಡಿತ, ಖಂಡಿತ!! ನಾಳೆಯಿಂದ ನನ್ನ ಲಂಚ್ ಸಂಪೂರ್ಣ ಬಂದ್."

"ನೀವು ತುಂಬಾ ಚೆನ್ನಾಗಿ ಪದಗಳನ್ನು ಜೋಡಿಸುತ್ತಿರಿ! ಏನೇ ಅಂದರೂ ಲೇಖಕರಲ್ಲವೇ?" ಆಕೆ ನಕ್ಕಳು.

...ಇವತ್ತು ಆಕೆಯನ್ನು ನೋಡಿ ನನಗೆ ನಿಜವಾಗಲೂ ಸಂತೃಪ್ತಿಯಾಯಿತು. ಆಕೆಯನ್ನು ನಾನು ಎಂದಿಗೂ ಮರೆಯಲು ಸಾಧ್ಯವಿರಲಿಲ್ಲ. ಆಕೆಯನ್ನು ನೆನೆದಾಗಲೆಲ್ಲಾ ನನ್ನ ರಕ್ತ ಕುದಿಯುತ್ತಿತ್ತು. ಕೊನೆಗೂ, ನಾನಲ್ಲದಿದ್ದರೂ ಪ್ರಕೃತಿ ಅವಳ ಮೇಲೆ ಸೇಡು ತೀರಿಸಿಕೊಂಡಿತ್ತು. ನಾನೇನೂ ಸೇಡು ತೀರಿಸಿಕೊಳ್ಳಲೇಬೇಕೆಂದು ಹಾತೊರೆಯುವವನಲ್ಲ. ಆದರೆ, ನನ್ನ ನಿಯಂತ್ರಣವನ್ನು ಮೀರಿದ ಶಕ್ತಿಗಳು ಕಾರ್ಯಾಚರಣೆಗಿಳಿದಿರುವಾಗ ನಾನೇನು ಮಾಡಬಲ್ಲೆ?

ಅಪರೂಪಕ್ಕೊಮ್ಮೆ 'ಲೈಟ್ ಆಂಡ್ ನ್ಯೂಟ್ರೀಶಿಯಸ್' ಲಂಚ್ ಮಾತ್ರ ತೆಗೆದುಕೊಳ್ಳುತ್ತಿರುವ ನನ್ನ ಸಾಹಿತ್ಯಾಭಿಮಾನಿ ಇಂದು ಸುಮಾರು ನೂರಾನಲವತ್ತು ಕೇಜಿ ಭಾರದ ದೇಹವನ್ನು ಹೊತ್ತು ತಿರುಗಾಡುತ್ತಿರುವುದನ್ನು ನೋಡುವಾಗ ನಾನು ಖುಷಿಪಡಬೇಕೋ ಬೇಡವೋ ನೀವೇ ಹೇಳಿ?!

### ಡಬ್ಲ್ಯು. ಸಾಮರ್ಸೆಟ್ ಮ್ಹಾಮ್ (1874–1965)

ಬ್ರಿಟಿಷ್ ಲೇಖಕ ಸಾಮರ್ಸೆಟ್ ಮ್ಹಾಮ್ ಹುಟ್ಟಿದ್ದು ಪ್ಯಾರಿಸಿನಲ್ಲಿ. ತನ್ನ ಕುಟುಂಬದ ಸಂಪ್ರದಾಯದಂತೆ ಅವನು ವಕೀಲ ವೃತ್ತಿ ಮಾಡಬೇಕಿತ್ತು. ಹುಟ್ಟಿನಿಂದಲೇ ಇದ್ದ ತೊದಲುವಿಕೆಯ ಕಾರಣದಿಂದ ಅವನು ವಕೀಲನಾಗಲಿಲ್ಲ. 10 ವರ್ಷ ವಯಸ್ಸಿನಲ್ಲೇ ಅನಾಥನಾದ ಅವನನ್ನು ಅವನ ಚಿಕ್ಕಪ್ಪ ಇಂಗ್ಲೆಂಡಿನಲ್ಲಿ ಸಾಕಿದ. ಅವನು ಪಡೆದದ್ದು ವೈದ್ಯ ಶಿಕ್ಷಣವಾದರೂ ಅವನ ಆಸಕ್ತಿ ಸಾಹಿತ್ಯದಲ್ಲಿತ್ತು. ಲೇಖಕನಾಗಿ ಹೆಸರು, ಹಣ ಗಳಿಸಲು ಅವನಿಗೆ ಬಹಳಷ್ಟು ವರ್ಷಗಳೇ ಹಿಡಿದವು. ಕಾದಂಬರಿಕಾರನಾಗಿ, ಸಣ್ಣ ಕತೆಗಾರನಾಗಿ ಹೆಸರು ಗಳಿಸುವ ಮೊದಲು ಅವನು ಖ್ಯಾತನಾಗಿದ್ದು ನಾಟಕಕಾರನಾಗಿ.

ಸಾಮರ್ಸೆಟ್ ಮ್ಹಾಮ್ ಒಬ್ಬ ಜಾಗತಿಕ ಪ್ರವಾಸಿಗನೂ ಆಗಿದ್ದ. ಅಧ್ಯಾತ್ಮವನ್ನು ಹುಡುಕುತ್ತಾ ಅವನು ತಮಿಳುನಾಡಿನ ರಮಣ ಮಹರ್ಷಿಯವರ ಆಶ್ರಮಕ್ಕೂ ಬಂದಿದ್ದ. ಅವನ ಪ್ರಖ್ಯಾತ ಕಾದಂಬರಿ 'Razor's Edge' ಜೀವನದ ಅರ್ಥವನ್ನು ಶೋಧಿಸುತ್ತ ಭಾರತಕ್ಕೆ ಬಂದು, ಸಾರ್ಥಕತೆಯನ್ನು ಪಡೆವ ವ್ಯಕ್ತಿಯ ಕತೆಯನ್ನು ಹೇಳುತ್ತದೆ.

### ಜೆ.ವಿ. ಕಾರ್ಲೊ

ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ 40ಕ್ಕೂ ಹೆಚ್ಚು ಸಣ್ಣಕತೆಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಕನ್ನಡ ಮಾತ್ರವಲ್ಲದೆ, ಕೊಂಕಣಿ ಭಾಷೆಯಲ್ಲಿ ಅವರ 100ಕ್ಕೂ ಹೆಚ್ಚು ಸಣ್ಣಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.